**Government of Karnataka**
**Deposition Shet (R.P.N.57) Form 4 Criminal**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್‌ಪ್ರಕರಣ ಸಂಖ್ಯೆ | 388/2018 |

ದಿನಾಂಕ 10-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 1 ಫ್ರಾಸಾಃ 1

| | |
|---|---|
| ಹೆಸರು | ಹನುಮಂತರಾಯ |
| ತಂದೆಯ ಹೆಸರು | ಬಾಲಪ್ಪ @ ಬಾಲಯ್ಯ |
| ವಯಸ್ಸು | 42 ವರ್ಷ |
| ಉದ್ಯೋಗ | ಕೂಲಿ ಕೆಸಲ |
| ವಾಸಸ್ಥಳ | ಸುಣ್ಣದಕಲ್ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಆರೋಪಿತರ ಪರಿಚಯ ನನಗೆ ಇರುತ್ತದೆ. 4 ನೇ ಆರೋಪಿ ಗೈರು ಹಾಜರಿ ಇರುತ್ತಾನೆ. ಚಾಸಾ–2 ರಿಂದ 9 ರವರ ಪರಿಚಯ ನನಗೆ ಇರುತ್ತದೆ. ನಾನು ಹೊಲದ ಮೇಲೆ ಸಾಲವನ್ನು ಪಡೆಯಲು ಸುಣದಕಲ್ ಗ್ರಾಮದಲ್ಲಿರುವ ಸೊಸೈಟಿಗೆ ಹೋಗಿದ್ದೆ. ನಾನು ಪಹಣಿ ತೆಗೆದು ನೋಡಿದಾಗ ಜಮೀನು ಅವರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಾಗಿರುತ್ತದೆ. ಸರ್ವೆ ನಂಬರ್ 12 ರಲ್ಲಿ 16 ಎಕರೆ 7 ಗುಂಟೆ ಜಮೀನು ಇತ್ತು. ನಾವೇ ಮೊಮ್ಮಕ್ಕಳು ಮತ್ತು ಮಗ ಇರುತ್ತೇವೆ ಎಂದು ಜಮೀನನ್ನು ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ. ನಾವು ಅವರ ಹೆಸರಿನಲ್ಲಿ ಹೇಗೆ ಆಗಿರುತ್ತದೆ ಎಂದು ದೂರನ್ನು ಕೊಟ್ಟಿರುತ್ತೇನೆ.

ನಮ್ಮ ತಂದೆಗೆ ಇಬ್ಬರು ಜನ ಗಂಡು ಮಕ್ಕಳು ಹಾಗೂ ಇಬ್ಬರು ಜನ ಹೆಣ್ಣು ಮಕ್ಕಳು ಇರುತ್ತೇವೆ. ನನ್ನ ತಂಗಿಯರು ಮದುವೆ ಮಾಡಿಕೊಂಡು ಗಂಡನ ಮನೆಯಲ್ಲಿ

–2–

ವಾಸ ಇರುತ್ತಾರೆ. ನಾವಿಬ್ಬರು ದುಡಿದುಕೊಂಡು ತಿನ್ನಲು ಮಹಾರಾಷ್ಟ್ರ ರಾಜ್ಯಕ್ಕೆ ಹೋಗಿರುತ್ತೇವೆ. ಮಹಾರಾಷ್ಟ್ರದಿಂದ ನಾವು ಊರಿಗೆ ಬಂದು ಸಾಲವನ್ನು ಕೇಳುತ್ತಿದ್ದಾಗ ಅವರ ಹೆಸರಿನಲ್ಲಿ ಜಮೀನು ಇತ್ತು ಅವರು ಕೊಡುವುದಿಲ್ಲ ಎಂದು ಹೇಳಿರುತ್ತಾರೆ. ಆಮೇಲೆ ನಾವು ದೂರನ್ನು ಕೊಟ್ಟಿರುತ್ತೇವೆ.

ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಪೋಲಿಸರು ಪಂಚನಾಮೆಯನ್ನು ಮಾಡಿಕೊಂಡು ಹೋಗಿರುತ್ತಾರೆ.

ಸ.ಸ.ಅ. ರವರು ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ.ಎಂ. ರವರಿಂದ:**

ಈಗ ನಾನು ಸುಣ್ಣದಕಲ್ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಕಳೆದ 5 ವರ್ಷಗಳಿಂದ ನಾನು ಸುಣ್ಣದಕಲ್ ಗ್ರಾಮದಲ್ಲಿ ವಾಸವಿದ್ದೇನೆ. 5 ವರ್ಷಕ್ಕಿಂತ ಮುಂಚೆ ನಾನು ಮಹಾರಾಷ್ಟ್ರ ರಾಜ್ಯದಲ್ಲಿ ದುಡಿದುಕೊಂಡು ತಿನ್ನಲು ಹೋಗಿದ್ದೆ. ಮಹಾರಾಷ್ಟ್ರ ರಾಜ್ಯದಲ್ಲಿ ನಾನು, ನನ್ನ ತಮ್ಮನಾದ ರಮೇಶ ಹಾಗೂ ನನ್ನ ಹೆಂಡತಿಯಾದ ಬಾಲಮ್ಮ ಇದ್ದೆವು. 1993 ರಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಇದ್ದೆವು. 2017 ನೇ ಇಸ್ವಿಯಿಂದ ಸುಣ್ಣದಕಲ್ ಗ್ರಾಮದಲ್ಲಿ ನಾವು ವಾಸವಾಗಿರುತ್ತೇವೆ. 1993 ನೇ ಇಸ್ವಿಯಿಂದ ರಮೇಶ ನನ್ನ ಜೊತೆಗೆ ಇದ್ದನು. 1995 ನೇ ಇಸ್ವಿಯಲ್ಲಿ ಬಾಲಮ್ಮಳ ಜೊತೆಗೆ ನನ್ನ ಮದುವೆಯಾಗಿತ್ತು. ಮದುವೆಯಾದ ನಂತರ ಬಾಲಮ್ಮ ನನ್ನ ಜೊತೆಗೆ ವಾಸವಿರುತ್ತಾಳೆ.



ಊರಲ್ಲಿ ಮನೆ ಇರುತ್ತದೆ ಸದರಿ ಮನೆಯಲ್ಲಿ ನನ್ನ ತಾಯಿಯವರು ವಾಸವಿರುತ್ತಾರೆ. ನನ್ನ ತಾಯಿ ಹೆಸರು ಹನುಮಂತಿ ಗಂಡ ಬಾಲಪ್ಪ ಇರುತ್ತದೆ. ನನ್ನ ತಾಯಿಯು ಖಾಯಂ ಆಗಿ ಸುಣ್ಣದಕಲ್ ಗ್ರಾಮದಲ್ಲಿ ವಾಸವಿರುತ್ತಾರೆ. ನನ್ನ ತಾಯಿಯು ನಮ್ಮ ಜೊತೆಗೆ ಮಹಾರಾಷ್ಟ್ರ ರಾಜ್ಯಕ್ಕೆ ಬಂದಿರುವುದಿಲ್ಲ.

2017 ನೇ ಇಸ್ವಿಯಲ್ಲಿ ನಾವು ಊರಿಗೆ ಬಂದಾಗ ಪಹಣಿಯಲ್ಲಿ ಹೆಸರು ದಾಖಲು ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ. 2017 ನೇ ಇಸ್ವಿಯಲ್ಲಿ ಗೊತ್ತಾದ ದಿನಾಂಕ, ತಿಂಗಳ ನನಗೆ ಹೇಳಲು ಬರುವುದಿಲ್ಲ. ನನಗೆ ಗೊತ್ತಾದ ಒಂದು ವರ್ಷದ ನಂತರ ನಾನು ದೂರನ್ನು ಕೊಟ್ಟಿರುತ್ತೇನೆ. ದೂರನ್ನು ಯಾವ ದಿನಾಂಕ, ತಿಂಗಳ ಮತ್ತು ಇಸ್ವಿಯಂದು ಕೊಟ್ಟಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ದೂರನ್ನು ಕೊಟ್ಟ 6 ತಿಂಗಳುಗಳ

ನಂತರ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ, ಆದರೆ 6 ತಿಂಗಳುಗಳ ಒಳಗಡೆ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. 6 ತಿಂಗಳು ಆದ ನಂತರ ನಾನು ಪುನ: ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ನೀವು 2 ಸಲ ಹೊರತುಪಡಿಸಿ ಪುನ: ನೀನು ಪೋಲಿಸ್ ಠಾಣೆಗೆ ಹೋಗಿರುತ್ತೀಯಾ ? ಎಂದರೆ ಸಾಕ್ಷಿಯು ಹೋಗಿರಬಹುದು ಆದರೆ ನನಗೆ ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ದೂರನ್ನು ಕೊಟ್ಟ ಮದು ದಿನ ಪೋಲಿಸರು ಪಂಚನಾಮೆಯನ್ನು ಮಾಡಲು ಬಂದಿದ್ದರು.

ಈ ಹಂತದಲ್ಲಿ ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಜೆ.ಎಂ.ಎಫ್.ಸಿ.3, ದೇವದುರ್ಗ

**Government of Karnataka**
**Deposition Shet (R.P.N.57) Form 4 Criminal**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 388/2018 |

ದಿನಾಂಕ 10-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 2 ಪ್ರಾಸಾಃ 2

| | |
|---|---|
| ಹೆಸರು | ಹನುಮಂತರಾಯ |
| ತಂದೆಯ ಹೆಸರು | ಸಾಬಯ್ಯ |
| ವಯಸ್ಸು | 42 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಸುಣ್ಣದಕಲ್ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಆರೋಪಿತರ ಪರಿಚಯ ನನಗೆ ಇರುವುದಿಲ್ಲ. 4 ನೇ ಆರೋಪಿ ಗೈರು ಹಾಜರಿ ಇರುತ್ತಾನೆ. ಚಾಸಾ-3 ರವರ ಪರಿಚಯ ನನಗೆ ಇರುತ್ತದೆ. ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಪೋಲಿಸರು ಪಂಚನಾಮೆಯನ್ನು ಮಾಡಿರುತ್ತಾರೆ. ಕಳೆದ 4 ವರ್ಷಗಳ ಹಿಂದೆ ಪೋಲಿಸರು ಪಂಚನಾಮೆಯನ್ನು ಮಾಡಿರುತ್ತಾರೆ. ಸಂಜೆ 4-00 ರಿಂದ 5-00 ಗಂಟೆಯವರೆಗೆ ಪೋಲಿಸರು ಪಂಚನಾಮೆಯನ್ನು ಮಾಡಿರುತ್ತಾರೆ.

ಸಾಕ್ಷಿಯು ಗುನ್ನೆ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸ.ಸ.ಅ. ರವರು ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ.ಎಂ. ರವರಿಂದ:**

ಚಾಸಾ-1 ನನ್ನ ಅಣ್ಣ ತಮ್ಮನಾಗಬೇಕು. ಚಾಸಾ-3 ನನ್ನ ಸಂಬಂಧಿಕನಾಗಬೇಕು. ಸರ್ವೆ ನಂಬರ್ 12 ರ ಜಮೀನಿನಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ. ಸರ್ವೆ ನಂಬರ್ 12 ರಲ್ಲಿ ಮಾಡಿದ ಪಂಚನಾಮೆಯನ್ನು

ಹೊರತುಪಡಿಸಿ ಬೇರೆ ಎಲ್ಲಿಯೂ ಪಂಚನಾಮೆಯನ್ನು ಮಾಡಿರುವುದಿಲ್ಲ. ಪಂಚನಾಮೆ ಮಾಡುವಾಗ 30 ರಿಂದ 40 ಜನರು ಇದ್ದರು. ಪಂಚನಾಮೆಯನ್ನು ಪೋಲಿಸರು ಮಾಡಿರುತ್ತಾರೆ. ಪಂಚನಾಮೆಯ ಮೇಲೆ ಎಷ್ಟು ಜನರ ಸಹಿಯನ್ನು ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳದಲ್ಲಿ ನಾನು ಸಹಿಯನ್ನು ಮಾಡಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಚಾಸಾ–1 ನನ್ನ ಅಣ್ಣ ತಮ್ಮನಾಗುವ ಕಾರಣ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಜೆ.ಎಂ.ಎಫ್.ಸಿ.೩, ದೇವದುರ್ಗ

**Government of Karnataka**
**Deposition Shet (R.P.N.57) Form 4 Criminal**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 388/2018 |

ದಿನಾಂಕ 10-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 3 ಫ್ರಾಸಾಃ 3

| | |
|---|---|
| ಹೆಸರು | ಮಲ್ಲಯ್ಯ |
| ತಂದೆಯ ಹೆಸರು | ಭೀಮಯ್ಯ |
| ವಯಸ್ಸು | 60 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಸುಣ್ಣದಕಲ್ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಆರೋಪಿತರ ಪರಿಚಯ ನನಗೆ ಇರುತ್ತದೆ. 4 ನೇ ಆರೋಪಿ ಗೈರು ಹಾಜರಿ ಇರುತ್ತಾನೆ. ಚಾಸಾ–2 ರವರ ಪರಿಚಯ ನನಗೆ ಇರುತ್ತದೆ. ಹೊಲದಲ್ಲಿ ಜಗಳ ಆಗಿತ್ತು ನನ್ನ ಹಾಗೂ ಚಾಸಾ–2 ರವರ ಸಮಕ್ಷಮ ಪೋಲಿಸರು ಪಂಚನಾಮೆಯನ್ನು ಮಾಡಿರುತ್ತಾರೆ. ಕಳೆದ 4–5 ವರ್ಷಗಳ ಹಿಂದೆ ಪೋಲಿಸರು ಪಂಚನಾಮೆಯನ್ನು ಮಾಡಿರುತ್ತಾರೆ. ಸಂಜೆ 4–00 ರಿಂದ 5–00 ಗಂಟೆಯವರೆಗೆ ಪೋಲಿಸರು ಪಂಚನಾಮೆಯನ್ನು ಮಾಡಿರುತ್ತಾರೆ.

ಸಾಕ್ಷಿಯು ಗುನ್ನ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–2 ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಪೋಲಿಸರು ಸ್ಥಳದಿಂದ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ.

ಸ.ಸ.ಅ. ರವರು ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ.ಎಂ. ರವರಿಂದ:**

ಸುಣ್ಣದಕಲ್ ಗ್ರಾಮದ ಸರ್ವೆ ನಂಬರ್ 12 ರಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆ ಮಾಡುವಾಗ 4–5 ಜನ ಹಾಗೂ ಪೋಲಿಸರು ಇದ್ದರು. 4–5 ಜನರ ಹೆಸರುಗಳು ಹನುಮಂತರಾಯ/ಚಾಸಾ–2, ದ್ಯಾವಪ್ಪ, ರಮೇಶ ಇರುತ್ತವೆ ಇನ್ನೊಬ್ಬನ ಹೆಸರು ನನಗೆ ನೆನಪಿರುವುದಿಲ್ಲ. ಪಂಚನಾಮೆ ಮೇಲೆ ಎಷ್ಟು ಜನರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ನನ್ನ ಸಹಿಯನ್ನು ಪೋಲಿಸರು ಮಾಡಿಸಿಕೊಂಡಿರುತ್ತಾರೆ. ನಾನು ಸಹಿ ಮಾಡಿದ ದಾಖಲೆಯು ಬರೆದದ್ದು ಇತ್ತು. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪಂಚನಾಮೆಯನ್ನು ಬರೆಯಲು ನಾವು ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಪೋಲಿಸರು ಪಂಚನಾಮೆಯನ್ನು ಬರೆದಿರುತ್ತಾರೆ. ಪಂಚನಾಮೆಯನ್ನು ಬರೆದ ನಂತರ ನನಗೆ ಓದಿ ಹೇಳಿರುವುದಿಲ್ಲ. ಚಾಸಾ–1 ರವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಜೆ.ಎಂ.ಎಫ್.ಸಿ.೩, ದೇವದುರ್ಗ

**Government of Karnataka**
**Deposition Shet (R.P.N.57) Form 4 Criminal**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 388/2018 |

ದಿನಾಂಕ 10-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 5 ಪ್ರಾಸಾಃ 4

| | |
|---|---|
| ಹೆಸರು | ತಾಯಮ್ಮ |
| ಗಂಡನ ಹೆಸರು | ಹುಚ್ಚಪ್ಪ |
| ವಯಸ್ಸು | 30 ವರ್ಷ |
| ಉದ್ಯೋಗ | ಹೊಲ ಮನೆ ಕೆಲಸ |
| ವಾಸಸ್ಥಳ | ಊಟಿ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಆರೋಪಿತರ ಪರಿಚಯ ನನಗೆ ಇರುವುದಿಲ್ಲ. 4 ನೇ ಆರೋಪಿ ಗೈರು ಹಾಜರಿ ಇರುತ್ತಾನೆ, ಅವರ ಹೆಸರು ಸಹ ನನಗೆ ಗೊತ್ತಿರುವುದಿಲ್ಲ. ಚಾಸಾ-1 ರಿಂದ 4, 6 ರಿಂದ 9 ರವರ ಪರಿಚಯ ನನಗೆ ಇರುತ್ತದೆ. ಚಾಸಾ-1 ನನ್ನ ಅಣ್ಣನಾಗಬೇಕು. ಚಾಸಾ-6 ನನ್ನ ಅಣ್ಣನಾಗಬೇಕು. ಚಾಸಾ-4 ನನ್ನ ಅಕ್ಕಳಾಗಬೇಕು. ಕಳೆದ 5 ವರ್ಷಗಳ ಹಿಂದೆ ನಮ್ಮ ಜಮೀನು ನಮಗೆ ಆಗಬೇಕು ಎಂದು ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. 16 ಎಕರೆ ಜಮೀನು ನಮ್ಮ ಹೆಸರಿಗೆ ಆಗಬೇಕು ಎಂದು ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟರುತ್ತೇನೆ. ಈ ಪ್ರಕರಣದ ಘಟನೆಯಾಗಿರುತ್ತದೆ ಎಂದು ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಸ.ಸ.ಅ. ರವರು ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ.ಎಂ. ರವರಿಂದ:**

ನಾನು ಊಟಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಾನು ಕಳೆದ 30-40 ವರ್ಷಗಳಿಂದ ಊಟಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಾನು ಪೂನಾಕ್ಕೆ ದುಡಿದುಕೊಂಡು ತಿನ್ನಲು ಹೋಗಿರುವುದಿಲ್ಲ, ಆದರೆ ನಮ್ಮ ಅಣ್ಣನವರು

ಹೋಗಿದ್ದರು. ಪೋಲಿಸರು ನನ್ನನ್ನು ಕರೆದು ಈ ಪ್ರಕರಣದ ಬಗ್ಗೆ ವಿಚಾರಿಸಿರುತ್ತಾರೆ. ನಾನು ಪೋಲಿಸರ ಮುಂದೆ ಮಹಾರಾಷ್ಟ್ರಕ್ಕೆ ದುಡಿದುಕೊಂಡು ತಿನ್ನಲು ಹೋಗಿದ್ದೆ ಎಂದು ಹೇಳಿರುವುದಿಲ್ಲ. ಸದರಿ ಭಾಗಶಃ ಹೇಳಿಕೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಆರೋಪಿತರ ಹೆಸರುಗಳು ನನಗೆ ಗೊತ್ತಿರುವುದಿಲ್ಲ. ಪೋಲಿಸರ ಮುಂದೆ ನಾನು ಆರೋಪಿತರ ಹೆಸರುಗಳನ್ನು ಹೇಳಿರುವುದಿಲ್ಲ. ಸದರಿ ಭಾಗಶಃ ಹೇಳಿಕೆಯನ್ನು ನಿಡಿ-2 ಎಂದು ಗುರುತಿಸಲಾಯಿತು.

ಹೊಲದ ಸಲುವಾಗಿ ಏನು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಚಾಸಾ-1 ಮತ್ತು 6 ರವರು ನನಗೆ ಸಾಕ್ಷಿ ಹೇಳು ಎಂದು ಹೇಳಿರುತ್ತಾರೆ. ಹೊಲದ ಸಲುವಾಗಿ ಏನು ಆಗಿರುತ್ತದೆ ಎಂದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನ್ನ ಅಣ್ಣನವರ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಜೆ.ಎಂ.ಎಫ್.ಸಿ.3, ದೇವದುರ್ಗ